ಬೆಂಗಳೂರಿನಲ್ಲಿ ದೋಬಿ ಘಾಟ್‌ಗಳ ಅಭಿವೃದ್ಧಿ ಯೋಜನೆ

431(45) ಶ್ರೀ ವಿ. ಸೋಮಣ್ಣ (ಬನ್ನಿಪೇಟೆ): ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಬೆಂಗಳೂರು ನಗರದಲ್ಲಿರುವ ಒಟ್ಟು ದೋಭಿ ಘಾಟ್‌ಗಳ ಸಂಖ್ಯೆ ಎಷ್ಟು?

ಆ. ಇವುಗಳ ಅಭಿವೃದ್ಧಿಗಾಗಿ ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮವು ಯೋಜನೆಯನ್ನು ಸಿದ್ಧಪಡಿಸಿದೆಯೇ?

ಇ. ಈ ಯೋಜನೆಗೆ ತಗಲುವ ಅಂದಾಜು ವೆಚ್ಚವೆಷ್ಟು?

ಈ. ಈ ದೋಭಿಘಾಟ್‌ಗಳಲ್ಲಿ ಕೈಗೊಳ್ಳಲಿರುವ ಅಭಿವೃದ್ಧಿ ಕಾಮಗಾರಿಗಳ ವಿವರ ನೀಡುವುದು?

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು)

ಅ. ಆ) ಈ ವಿಷಯಕ್ಕೆ ಸಂಭಂದಿಸಿದ ಅಂಕಿ ಅಂಶಗಳು ಇಲಾಖೆಯಲ್ಲಿ ಲಭ್ಯವಿಲ್ಲ ಈ ಬಗ್ಗೆ ಯಾವುದೇ ಕಾರ್ಯಕ್ರಮ ರೂಪಿತವಾಗಿಲ್ಲ, ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮವು ಈ ಬಗ್ಗೆ ಯಾವುದೇ ಯೋಜನೆಯನ್ನು ಸಿದ್ಧಪಡಿಸಿರುವುದಿಲ್ಲ.

ಇ. ಉದ್ಭವಿಸುವುದಿಲ್ಲ.

ಈ. ಉದ್ಭವಿಸುವುದಿಲ್ಲ.

ಬೆಂಗಳೂರು ನಗರದಲ್ಲಿ ಸಮರ್ಪಕ ಹಾಲು ಪೂರೈಕೆ

432(47) ಶ್ರೀ ಸೋಮಣ್ಣ ವಿ. (ಬನ್ನಿಪೇಟೆ): ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಬೆಂಗಳೂರು ನಗರದಲ್ಲಿ ಪ್ರತಿದಿನ ಮಾರಾಟ ವಾಗುತ್ತಿರುವ ಸರಾಸರಿ ಬೆಂಗಳೂರು ಡೇರಿ ಹಾಲಿನ ಪ್ರಮಾಣವೇಷ್ಟು?

ಆ. ನಗರದಲ್ಲಿರುವ ಹಾಲಿನ ಎಜೆಂಟರು ಹಾಗೂ ಮದರ್ ಡೇರಿ ಬೂತ್‌ಗಳ ಸಂಖ್ಯೆ ಎಷ್ಟು?

ಇ. 2002-03ನೇ ಸಾಲಿನಲ್ಲಿ ಹೊಸದಾಗಿ ಎಷ್ಟು ಜನರಿಗೆ ಹಾಲೂ ಮಾರಾಟ ಮಾಡಲು ಪರವಾನಗಿ ನೀಡಲಾಗಿದೆ.

ಈ. ಹಾಲನ್ನು ಮನೆಗಳಿಗೆ ಪೂರೈಕೆ ಮಾಡಲು ಖಾಸಗಿ ವ್ಯಕ್ತಿಗಳು ಹೆಚ್ಚಿನ ಶುಲ್ಕ ವಿಧಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ. ಡೇರಿ ಮತಿಯಿಂದಲೇ ಮನೆಗಳಿಗೆ ಹಾಲು ಪೂರೈಕೆ ಮಾಡಲು ಕ್ರಮ ಕೈಗೊಳ್ಳಲಾಗುವುದೇ;

ಊ. ಬೆಂಗಳೂರು ನಗರದಲ್ಲಿ 100 ಮಿ.ಲೀ ಹಾಲಿನ ಪ್ಯಾಕೆಟ್ ಗಳನ್ನು ಮಾರಾಟ ಮಾಡಲಾಗುತ್ತಿದೆಯೇ;

ಋ. ಹೆಚ್ಚಿನ ಜನರು ಬೆಂಗಳೂರು ಡೇರಿ ಹಾಲನ್ನು ಉಪಯೋಗಿಸುವಂತೆ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಎಂ. ಮಹದೇವ್ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು)

ಅ. ಬೆಂಗಳೂರು ನಗರದಲ್ಲಿ ಬೆಂಗಳೂರು ಡೇರಿಯಿಂದ ಮಾರಾಟ ಮಾಡುವ ಸರಾಸರಿ ದಿನವಹಿ ಹಾಲಿನ ಪ್ರಮಾಣವು ಸುಮಾರು 4.32 ಲಕ್ಷ ಲೀಟರ್‌ಗಳಾಗಿರುತ್ತದೆ.

ಆ. ಬೆಂಗಳೂರು ನಗರದಲ್ಲಿ ಬೆಂಗಳೂರು, ಕೋಲಾರ, ತುಮಕೂರು, ಮಂಡ್ಯ ಹಾಲು ಒಕ್ಕೂಟಗಳು ಮತ್ತು ಮಾತೃ ಡೇರಿ ಹಾಲೂ ಸರಬರಾಜು ಮಾಡುತ್ತಿವೆ.

ಹಾಲಿನ ಏಜೆಂಟರುಗಳ ಒಟ್ಟು ಸಂಖ್ಯೆ : 1806

ಮದರ್ ಡೇರಿ:

1. ಬಿಲ್ಕ್ ವೆಂಡಿಂಗ್ ಬೂತ್‌ಗಳು 119
2. ಎಫ್.ಆರ್.ಪಿ. ಬ್ಯಾಂಕ್‌ಗಳು 131

ಇ. 2002-03ನೇ ಸಾಲಿನಲ್ಲಿ ಹೊಸದಾಗಿ ಬೆಂಗಳೂರು ನಗರದಲ್ಲಿ ನೀಡಲಾಗಿರುವ ಹಾಲಿನ ಮಾರಾಟ ಪರವಾನಗಿಗಳು:

1. ಬೆಂಗಳೂರು ಹಾಲೂ ಒಕ್ಕೂಟದಿಂದ 137
2. ಮಂಡ್ಯ ಹಾಲು ಒಕ್ಕೂಟದಿಂದ 48
3. ತುಮಕೂರು ಹಾಲೂ ಒಕ್ಕೂಟದಿಂದ 24
4. ಕೋಲಾರ ಹಾಲೂ ಒಕ್ಕೂಟದಿಂದ 20
5. ಮದರ್ ಡೇರಿಯಿಂದ:

   ಸ್ಯಾಚೆಟ್‌ಹಾಲು ಮಾರಲು 42

   ಬಿಲ್ಕ್ ವೆಂಡಿಂಗ್ ಬೂತ್ 22

   ಎಫ್.ಆರ್.ಪಿ. ಟ್ಯಾಂಕ್ 27

ಈ. ಗ್ರಾಹಕರ ಮನೆಗಳಿಗೆ ಸರಬರಾಜು ಮಾಡುವ ಹಾಲಿಗೆ ಹಾಲು ವಿತರಣೆ ಮಾಡುವವರು ಅಲ್ಪ ಪ್ರಮಾಣದ ಸೇವಾ ಶುಲ್ಕ ತೆಗೆದುಕೊಳ್ಳುತ್ತಾರೆ.

ಉ. ಇಲ್ಲ.

ಊ. ಬೆಂಗಳೂರು ನಗರದಲ್ಲಿ ಸದ್ಯದಲ್ಲೆ 100 ಮಿ.ಲಿ. ಹಾಲಿನ ಪ್ಯಾಕೆಟ್‌ಗಳನ್ನು ಮಾರಾಟಕ್ಕೆ ಬಿಡುಗಡೆ ಮಾಡಲು ಕ್ರಮವಿಡಲಾಗುತ್ತಿದೆ.

ಋ. ಮೆಗಾ ಡೇರಿಗೆ ಗ್ರಾಹಕರನ್ನು ಡೇರಿಯ ಖರ್ಚಿನಲ್ಲಿಯೇ ಕರೆತಂದು ಹಾಲನ್ನು ಸ್ವೀಕರಿಸಿ ಗ್ರಾಹಕರಿಗೆ ವಿತರಣೆಯಾಗುವ ತನಕದ ಕಾರ್ಯವೈಖರಿ ಬಗ್ಗೆ ಮಾಹಿತಿ ನೀಡಲಾಗುತ್ತಿದೆ.

2. ಗ್ರಾಹಕರಿಂದ ಬಂದ ದೂರುಗಳನ್ನು 24 ಗಂಟೆಗಳೊಳಗೆ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುತ್ತಿದ.

3. ಗ್ರಾಹಕರಿಗೆ ನಂದಿನಿ ಹಾಲಿನ ಶ್ರೇಷ್ಠತೆ, ಗುಣಮಟ್ಟ ಮತ್ತು ಗುಣಮಟ್ಟದ ಬಗ್ಗೆ ಅರಿವು ಮೂಡಿಸಲು ಪರೀಕ್ಷಣಾ ಕೇಂದ್ರಗಳನ್ನು ಸ್ಥಾಪಿಸಿ ಗ್ರಾಹಕರ ಮುಂದೆ ಹಾಲನ್ನು ಪರೀಕ್ಷಿಸಿ ತಿಳುವಳಿಕೆ ನೀಡಲಾಗುತ್ತಿದೆ.

4. ರೀಟೇಲ್‌ದಾರರಿಗೆ ಹಾಲನ್ನು ಗ್ರಾಹಕರಿಗೆ ನೀಡಲು ಅನುಕೂಲವಾಗುವಂತೆ ಕೂಲರ್, ರೆಫ್ರಿಜರೇಟರ್ ಮತ್ತು ಇನ್ಸುಲೇಟೆಡ್ ಬಾಕ್ಸ್‌ಗಳನ್ನು ನೀಡಲಾಗುತ್ತಿದೆ.

5. ನಗರದ ಆಯ್ದ ಅತಿ ಮುಖ್ಯ ಭಾಗಗಳಲ್ಲಿ ಸುಸಜ್ಜತ ಮಾರಾಟ ಮಳಿಗೆಗಳನ್ನು ಸ್ಥಾಪಿಸಲಾಗಿದೆ.

6. ಸಭೆ ಸಮಾರಂಭಗಳಿಗೆ ಹಾಗೂ ಮದುವೆಗಳಿಗೆ ಬೇಡಿಕೆ ಬಂದಾಗ ನೇರವಾಗಿ ಡೇರಿಯಿಂದಲೇ ಹಾಲನ್ನು ವಿತರಿಸುವ ಪರಿಪಾಠ ಜಾರಿಯಲ್ಲಿದೆ.